# ಮಿಲ್ ಗೇಟ್ ದರ ಯೋಜನೆ

## ಪ್ರಸ್ತಾವನೆ

ಕೈಮಗ್ಗ ನೇಯ್ಗೆ ಭಾರತದ ಉದ್ದಗಲಕ್ಕೂ ಹರಡಿದೆ. ಅದರಲ್ಲೂ ಬಹಳಷ್ಟು ಗ್ರಾಮಗಳಲ್ಲಿ ಅದರ ಇರುವನ್ನು ನೋಡಬಹುದು. ಕೈಮಗ್ಗ ವಲಯದಲ್ಲಿ 65 ಲಕ್ಷಕ್ಕೂ ಹೆಚ್ಚು ಜನರು ನೇಯ್ಗೆ ಕೆಲಸದಲ್ಲೂ ಮತ್ತು ಸಂಬಂಧಿತ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. (1995–96ರಲ್ಲಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳು ಜಂಟಿಯಾಗಿ ನಡೆಸಿದ ಸಮೀಕ್ಷೆಯಲ್ಲಿ ತಿಳಿದು ಬಂದ ಅಂಶ). ಈ ಕೈಗಾರಿಕೆಯಲ್ಲಿ ನೂಲು ಹೆಚ್ಚು ಕಚ್ಚಾ ವಸ್ತುವಾಗಿ ಬಳಸಲ್ಪಡುತ್ತದೆ. ಇವುಗಳನ್ನು ರೇಷ್ಮೆ ಅಥವಾ ನೂಲಿನ ಗಿರಣಿಗಳು ಉತ್ಪಾದಿಸುತ್ತವೆ. ನೂಲಿನ ವ್ಯಾಪಾರವನ್ನು ಮಾರಾಟಗಾರರು ನಿಯಂತ್ರಿಸುತ್ತಾರೆ. ಕೈಮಗ್ಗ ನೇಕಾರರು ನೂಲಿನ ಮೇಲೆ ಅವಲಂಬಿತರಾಗಿದ್ದಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ನೂಲಿನ ಕೃತಕ ಅಭಾವ ತಲೆದೋರಿದ್ದು ಬೆಲೆಗಳಲ್ಲೂ ಹೆಚ್ಚಳವಾಗಿದೆ.

ನೇಕಾರರ ಸಮಸ್ಯೆಗಳನ್ನು ಬಗೆಹರಿಸಲು ರಾಷ್ಟ್ರೀಯ ಮಟ್ಟದ ಅಪೆಕ್ಸ್ ಮಂಡಳಿಯ ಅವಶ್ಯಕತೆಯನ್ನು ಕೇಂದ್ರ ಸರ್ಕಾರ ಮನಗಂಡಿತು. ನೂಲು ಮಾರುಕಟ್ಟೆಯ ಆಗು ಹೋಗುಗಳನ್ನು ಗಮನಿಸುವ ಸಲುವಾಗಿ 1983ರಲ್ಲಿ ಭಾರತ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್ಎಚ್ಡಿಸಿ)ವನ್ನು ಸ್ಥಾಪಿಸಿತು.

ಕೈಮಗ್ಗ ನೇಕಾರರಿಗೆ ಅವಶ್ಯ ಗುಣಮಟ್ಟದ ನೂಲನ್ನು ಸುವ್ಯವಸ್ಥಿತ ರೀತಿಯಲ್ಲಿ ರಾಷ್ಟ್ರಾದ್ಯಂತ ದೊರೆಯುವಂತೆ ಮಾಡುವುದು ಎನ್ಎಚ್ಡಿಸಿಯ ಮೂಲ ಉದ್ದೇಶಗಳಲ್ಲಿ ಒಂದು. ಯಾವುದೇ ಒಂದು ಸ್ಥಳದಲ್ಲಿ ಉತ್ಪಾದಿಸುವ ನೂಲಿನ ಗುಣಮಟ್ಟ ಸುತ್ತ ಮುತ್ತಲ ಪ್ರದೇಶಗಳಲ್ಲಿ ದೊರೆಯುವ ಹತ್ತಿಯ ದರ್ಜೆಯನ್ನು ಅವಲಂಬಿಸಿದೆ. ಹಾಗಾಗಿ ಸಾಕಷ್ಟು ಸಂದರ್ಭಗಳಲ್ಲಿ ನೇಕಾರರು ಬೇರೆ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ನೂಲನ್ನೇ ನಂಬಿಕೊಂಡಿರುತ್ತಾರೆ. ನೂಲನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುವಾಗ ಅದರ ಮೌಲ್ಯವೂ ಹೆಚ್ಚುತ್ತದೆ. ಹಾಗಾಗಿ ನೇಕಾರರು ತೊಂದರೆಗೆ ಈಡಾಗುವ ಸಂಭವವೂ ಹೆಚ್ಚು. ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡ ಭಾರತ ಸರ್ಕಾರವು ನೂಲನ್ನು ನಿಗದಿತ ಬೆಲೆಯಲ್ಲಿ ಸರಬರಾಜು ಮಾಡಲು 1992ರಲ್ಲಿ ಮಿಲ್‌ಗೇಟ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ಈ ಯೋಜನೆಯಲ್ಲಿ ಸಾರಿಗೆ ವೆಚ್ಚಕ್ಕೆಂದು ಭರಿಸಲಾದ ಮೊತ್ತವನ್ನು ಕೇಂದ್ರ ಸರ್ಕಾರವೇ ಪಾವತಿಸುತ್ತದೆ. ಯೋಜನೆ ಜಾರಿಯ ಜವಾಬ್ದಾರಿಯನ್ನು ಎನ್ಎಚ್ಡಿಸಿ ಕೊಡಲಾಗಿದೆ.

ಎನ್ಎಚ್ಡಿಸಿಯ ಚಟುವಟಿಕೆಗಳು ಮತ್ತಷ್ಟು ಬಲಗೊಳ್ಳುವ ಸಲುವಾಗಿ ಕೇಂದ್ರ ಸರ್ಕಾರವು ಷೇರುಬಂಡವಾಳ ನೀಡಿದೆ. ಬಂಡವಾಳ ಹೂಡಿಕೆಯಿಂದ ಎನ್ಎಚ್ಡಿಸಿಯನ್ನು ಬಲಗೊಳಿಸುವುದು ಮುಖ್ಯ ಕಾರ್ಯಚಟುವಟಿಕೆಗಳಲ್ಲಿ ಒಂದು. ಎನ್ಎಚ್ಡಿಸಿಯಲ್ಲಿ ಹೂಡಲಾದ ಬಂಡವಾಳವನ್ನು ಮಿಲ್‌ಗೇಟ್ ದರ ಯೋಜನೆಯೊಂದಿಗೆ

ಸಮ್ಮಿಳನಗೊಳಿಸುವುದು. ಆ ಮೂಲಕ ಮಿಲ್‌ಗೇಟ್ ದರ ಯೋಜನೆಯನ್ನು ಜಾರಿಗೊಳಿಸುವುದು ಸೇರಿದೆ. ಮಿಲ್‌ಗೇಟ್ ದರ ಯೋಜನೆಯಲ್ಲಿ ಎರಡು ಭಾಗಗಳಿವೆ. ಅ. ಮಿಲ್‌ಗೇಟ್ ದರದಲ್ಲಿ ನೂಲನ್ನು ಕೊಡುವುದು ಆ. ಎನ್‌ಎಚ್‌ಡಿಸಿಯಲ್ಲಿ ಬಂಡವಾಳ ಹೂಡುವುದು.

**ಮಿಲ್‌ಗೇಟ್ ದರದಲ್ಲಿ ನೂಲನ್ನು ಸರಬರಾಜು ಮಾಡುವುದು**

**1. ಉದ್ದೇಶ**

ಮಿಲ್‌ಗೇಟ್ ದರದಲ್ಲಿ ಎಲ್ಲಾ ಬಗೆಯ ನೂಲು ದೊರೆಯುವಂತೆ ಮಾಡುವುದು. ಈ ಮೂಲಕ ಕೈಮಗ್ಗ ವಲಯಕ್ಕೆ ಬೇಕಾಗುವ ಮೂಲ ಕಚ್ಚಾ ವಸ್ತುವಿನ ಕೊರತೆ ಇಲ್ಲದಂತೆ ಮಾಡುವುದು ಮತ್ತು ಆ ವಲಯದಲ್ಲಿ ಪೂರ್ಣ ಕೆಲಸವನ್ನು ಕೊಡುವ ಅವಕಾಶ.

**2, ಯೋಜನೆಯ ಗುರಿ:**

2.1 ಯೋಜನೆಗೆ ಅರ್ಹವಾದ ಸಂಸ್ಥೆಗಳು ಕೆಳಕಂಡಂತೆ ಇವೆ.

- ರಾಷ್ಟ್ರೀಯ/ರಾಜ್ಯ/ಪ್ರಾದೇಶಿಕ/ಪ್ರಾಥಮಿಕ ಕೈಮಗ್ಗ ಸಂಸ್ಥೆಗಳು.
- ಕೈಮಗ್ಗ ಅಭಿವೃದ್ಧಿ ಕೇಂದ್ರ
- ಎಚ್‌ಇಪಿಸಿ / ಜವಳಿ ಸಚಿವಾಲಯದ ಅಡಿಯಲ್ಲಿ ಬರುವ ಯಾವುದಾದರೂ ರಫ್ತು ಪ್ರೋತ್ಸಾಹ ಮಂಡಲಿಗೆ / ಕೈಗಾರಿಕಾ ನಿರ್ದೇಶನಾಲಯ / ರಾಜ್ಯದ ಯು.ಟಿ.ಯು ಕೈಮಗ್ಗ ಕೈಗಾರಿಕಾ ನಿರ್ದೇಶನಾಲಯದಲ್ಲಿ ನೊಂದಣಿ ಮಾಡಿಕೊಂಡಿರುವ ಕೈಮಗ್ಗ ಉತ್ಪನ್ನಗಳ ಉತ್ಪಾದಕರು / ರಫ್ತುದಾರರು
- ಕೈಮಗ್ಗ ವಸ್ತುಗಳ ಉತ್ಪಾದನೆಗೆ ನೆರವಾಗುವ ಅನುಮೋದಿತ ರಫ್ತು ಸಂಸ್ಥೆಗಳು / ವ್ಯಾಪಾರ ಮಳಿಗೆಗಳು / ರಾಜ್ಯ ಟ್ರೇಡಿಂಗ್ ಸಂಸ್ಥೆ.
- ಮಾನ್ಯತೆ ಪಡೆದ / ಅಧಿಕೃತ ಕೈಮಗ್ಗ ಸಂಘಟನೆಗಳ ಸದಸ್ಯರು
- ಕ್ಯಾಪ್‌ಆರ್ಟ್ ನಿಯಮಾವಳಿಗಳಿಗೆ ಬದ್ಧವಾದ ಸಂಸ್ಥೆಗಳು
- ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿ, ಜವಳಿ ಸಚಿವಾಲಯ, ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಏಜನ್ಸಿ

2.2 ಕೈಮಗ್ಗ ವಸ್ತುಗಳ ಉತ್ಪಾದನೆಗೆ ಬೇಕಾಗುವ ಎಲ್ಲಾ ಬಗೆಯ ನೂಲುಗಳನ್ನು ಮಿಲ್ ಗೇಟ್ ಬೆಲೆಯಲ್ಲಿ ದೊರೆಯುವಂತೆ ಮಾಡುವುದು. ಮಿಲ್‌ಗೇಟ್ ಬೆಲೆಯೆಂದರೆ ಅಧಿಕೃತ ಲೈಸನ್ಸ್‌ದಾರರಿಂದ ಅಂದರೆ ರೇಷ್ಮೆ ದಾರಕ್ಕೆ ಸಂಬಂಧಿಸಿದಂತೆ ರೇಷ್ಮೆ ವಿನಿಮಯ ಕೇಂದ್ರ, ಬಣ್ಣ / ಸಂಸ್ಕರಣೆಗೊಂಡು ನೂಲಿಗಾಗಿ ಸಂಸ್ಕರಣಾಕಾರರು/ಬಣ್ಣದ ಮನೆಗಳಿಂದ ಮತ್ತು ಹತ್ತಿ ಮತ್ತು ಇನ್ನಿತರ ನೂಲುಗಳನ್ನು ಅಧಿಕೃತ ನೂಲಿನ ಗಿರಣಿಗಳಿಂದ ಪಡೆಯುವುದು ಸೇರಿದೆ. ಎನ್‌ಎಚ್‌ಡಿಸಿ ತನ್ನೆಲ್ಲಾ ವಹಿವಾಟುಗಳನ್ನು ಕ್ರಾಸ್ಡ್ ಚೆಕ್ ಮೂಲಕವೇ ವ್ಯವಹರಿಸುತ್ತದೆ.

**3. ಸಂಸ್ಥೆಯ ವ್ಯವಸ್ಥೆ:**

3.1 ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್‌ಎಚ್‌ಡಿಸಿ)ವು ಯೋಜನೆಗಳನ್ನು ಜಾರಿಗೆ ತರುವ ಏಜೆನ್ಸಿಯಾಗಿದೆ.

3.2 ಎನ್‌ಎಚ್‌ಡಿಸಿ ಮೂಲಕವೇ ಅರ್ಹ ಏಜೆನ್ಸಿಗಳಿಗೆ ವಸ್ತುಗಳನ್ನು ಸರಬರಾಜು ಮಾಡಲಾಗುವುದು. (2.1ರಲ್ಲಿ ಸೂಚಿಸಿದಂತೆ)

**4. ಸರಬರಾಜು ವ್ಯವಸ್ಥೆ:**

4.1 ಅರ್ಹ ಏಜೆನ್ಸಿಗಳು ತಮ್ಮ ಇಂಡೆಂಟ್‌ಗಳನ್ನು ಈ ಯೋಜನೆ ಅಡಿಯಲ್ಲಿ ಎನ್‌ಎಚ್‌ಡಿಸಿಯಲ್ಲಿ ಇಡುತ್ತದೆ

4.2 ಬೇಡಿಕೆಯನ್ನು ಆಧರಿಸಿ ಎನ್‌ಎಚ್‌ಡಿಸಿ ಸರಬರಾಜುದಾರರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ.

4.3 ಯೋಜನೆಯ ಮೂಲಕ ಬಳಕೆದಾರ ಏಜೆನ್ಸಿಗಳು ಬಟ್ಟೆಗಳ ಉತ್ಪಾದನೆಗೆ ಅಥವಾ ಸೊಸೈಟಿಗಳ ಸದಸ್ಯರಿಗೆ ಸರಬರಾಜು ಮಾಡಲು / ನೇರವಾಗಿ ನೊಂದಾಯಿತ ನೇಕಾರರಿಗೆ ಯೋಜನೆಯ ಪೂರ್ಣ ಲಾಭವನ್ನು ವರ್ಗಾಯಿಸುವುದು ಸೇರಿದೆ.

ಪ್ರತಿಯೊಂದು ಬಳಕೆದಾರ ಏಜೆನ್ಸಿಗಳು ಎನ್‌ಎಚ್‌ಡಿಸಿಗೆ ಪರಿಚ್ಛೇದ–1ರಲ್ಲಿ ಇರುವಂತೆ ವಿವರಗಳನ್ನು ನಮೂದಿಸಬೇಕು.

**5. ಹಿಂಪಡೆಯುವುದು:**

5.1 ಮಿಲ್‌ಗೇಟ್ ದರ ಯೋಜನೆಯ ಪ್ರಕಾರ, ಕೆಲವೊಂದು ನೆರವನ್ನು ಭಾರತ ಸರ್ಕಾರವು ಪ್ಯಾರಗ್ರಾಫ್ 5.2ರಲ್ಲಿ ಉಲ್ಲೇಖಿಸಿದ ದರದಂತೆ ಕೊಡುತ್ತದೆ.

1. ನೂಲು ಸಾಗಣೆಯಲ್ಲಿ ಸರಕು ಸಾಗಣೆಗೆ ತಗುಲಿದ ವೆಚ್ಚವನ್ನು ಹಿಂದಿರುಗಿಸುವುದು
2. ಗರಿಷ್ಟ 2.5% ಗಳಿಗೊಳಪಟ್ಟು ನೂಲಿನ ಮಳಿಗೆ ನಡೆಸಲು ಬೇಕಾದ ಖರ್ಚು
3. ಮಿಲ್‌ಗೇಟ್ ದರ ಯೋಜನೆ ಜಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಪಾತ್ರಕ್ಕಾಗಿ ಎನ್‌ಎಚ್‌ಡಿಸಿಗೆ ಸೇವಾ ಶುಲ್ಕ ಪಾವತಿ.

ಇವುಗಳಲ್ಲಿ, 1. ಮತ್ತು 2. ರಲ್ಲಿ ನಮೂದಾದ ಶುಲ್ಕಗಳನ್ನು ಎನ್‌ಎಚ್‌ಡಿಸಿ ಅರ್ಹ ಏಜೆನ್ಸಿಗಳಿಗೆ (ಪ್ಯಾರಗ್ರಾಫ್ 2.1ರಲ್ಲಿ ನಮೂದಾದಂತೆ) ಪಾವತಿಸುತ್ತದೆ. ಹೀಗೆ ಎನ್‌ಎಚ್‌ಡಿಸಿ ಪಾವತಿಸಿದ ಹಣವನ್ನು ಭಾರತ ಸರ್ಕಾರವು ಮರಳಿ ಕೊಡುತ್ತದೆ.

5.2 ಸರಕು ಸಾಗಣೆ ವೆಚ್ಚವನ್ನು ಹಿಂಪಾವತಿಸುವುದು, ನೂಲು ಮಳಿಗೆಗಳ ನಿರ್ವಹಣೆಗೆ ತಗಲುವ ಖರ್ಚು ಮತ್ತು ಎನ್‌ಎಚ್‌ಡಿಸಿಯ ಸೇವಾಶುಲ್ಕಗಳು ಕೆಳಕಂಡಂತಿವೆ.

ಅ. ಸುಲಭವಾಗಿ ಸರಬರಾಜು ಮಾಡಲು:

(ಶೇಕಡಾವಾರು ನೂಲು ಸರಬರಾಜು ಮೌಲ್ಯ)

| ನೂಲಿನ ವಿಧ | ಗರಿಷ್ಠ ಸರಕು ಸಾಗಣೆ ವೆಚ್ಚವನ್ನು ಅರ್ಹ ಏಜೆನ್ಸಿ ಹಿಂಪಾವತಿಸುವುದು | ಮಳಿಗೆ ನಡೆಸಲು ಬೇಕಾದ ವೆಚ್ಚವನ್ನು ಅರ್ಹ ಏಜೆನ್ಸಿಗಳಿಗೆ ಹಿಂಪಾವತಿಸುವುದು | ಸೇವಾ ಶುಲ್ಕ ವೆಚ್ಚವನ್ನು ಎನ್‌ಎಚ್‌ಡಿಸಿಗೆ ಸೇವಾ ಶುಲ್ಕ |
|---|---|---|---|
| ರೇಷ್ಮೆ ಮತ್ತು ಜ್ಯೂಟ್ ಹೊರತಾದ ನೂಲು | 1.0 % | 2.5 % | 1.5 % |
| ರೇಷ್ಮೆ ನೂಲು | 1.0 % | 2.5 % | 1.5 % |
| ಜ್ಯೂಟ್ ನೂಲು | 7.0 % | 2.5 % | 1.5 % |

ಬಿ. ಬೆಟ್ಟ ಗುಡ್ಡಗಳಲ್ಲಿ ಮತ್ತು ದೂರದ ಪ್ರದೇಶಗಳಲ್ಲಿ ಸರಬರಾಜು ಮಾಡಲು

(ಶೇಕಡಾವಾರು ನೂಲು ಸರಬರಾಜು ಮೌಲ್ಯ)

| ನೂಲಿನ ವಿಧ | ಗರಿಷ್ಠ ಸರಕು ಸಾಗಣೆ ವೆಚ್ಚವನ್ನು ಅರ್ಹ ಏಜೆನ್ಸಿ ಹಿಂಪಾವತಿಸುವುದು | ಮಳಿಗೆ ನಡೆಸಲು ಬೇಕಾದ ವೆಚ್ಚವನ್ನು ಅರ್ಹ ಏಜೆನ್ಸಿಗಳಿಗೆ ಹಿಂಪಾವತಿಸುವುದು | ಎನ್‌ಎಚ್‌ಡಿಸಿಗೆ ಸೇವಾ ಶುಲ್ಕ |
|---|---|---|---|
| ರೇಷ್ಮೆ ಮತ್ತು ಜ್ಯೂಟ್ ಹೊರತಾದ ನೂಲು | 1.75 % | 2.5 % | 1.0 % |
| ರೇಷ್ಮೆ ನೂಲು | 1.250 % | 2.5 % | 1.0 % |
| ಜ್ಯೂಟ್ ನೂಲು | 8.0 % | 2.5 % | 1.0 % |

ಸಿ. ಈಶಾನ್ಯ ಪ್ರಾಂತ್ಯದಲ್ಲಿ ಸರಬರಾಜು ಮಾಡಲು

(ಶೇಕಡಾವಾರು ನೂಲು ಸರಬರಾಜು ಮೌಲ್ಯ)

| ನೂಲಿನ ವಿಧ | ಗರಿಷ್ಠ ಸರಕು ಸಾಗಣೆ ವೆಚ್ಚವನ್ನು ಅರ್ಹ ಏಜೆನ್ಸಿ ಹಿಂಪಾವತಿಸುವುದು | ಮಳಿಗೆ ನಡೆಸಲು ಬೇಕಾದ ವೆಚ್ಚವನ್ನು ಅರ್ಹ ಏಜೆನ್ಸಿಗಳಿಗೆ ಹಿಂಪಾವತಿಸುವುದು | ಎನ್‌ಎಚ್‌ಡಿಸಿಗೆ ಸೇವಾ ಶುಲ್ಕ |
|---|---|---|---|
| ರೇಷ್ಮೆ ಮತ್ತು ಜ್ಯೂಟ್ ಹೊರತಾದ ನೂಲು | 3.0 % | 2.5 % | 0.75 % |
| ರೇಷ್ಮೆ ನೂಲು | 1.5 % | 2.5 % | 0.75 % |
| ಜ್ಯೂಟ್ ನೂಲು | 8.5 % | 2.5 % | 0.75 % |

5.3 ನೂಲಿನ ಮಳಿಗೆಗಳ ಬದಲಾಗಿ ನೇರವಾಗಿ ಗ್ರಾಹಕರಿಗೆ ಎನ್‌ಎಚ್‌ಡಿಸಿ ನೂಲನ್ನು ಸರಬರಾಜು ಮಾಡಿದಾಗ ಎನ್‌ಎಚ್‌ಡಿಸಿಯು ಕೇವಲ ಸರಕು ಸಾಗಣೆ ವೆಚ್ಚವನ್ನು ಮತ್ತು ಸೇವಾ ಶುಲ್ಕವನ್ನು ಪ್ಯಾರಾ 5.2ರಲ್ಲಿ ತಿಳಿಸಿದಂತೆ ಹಿಂಪಾವತಿಸಿರುತ್ತದೆ.

5.4 ಪ್ಯಾರಾ 5.2ರಲ್ಲಿ ತಿಳಿಸಿದಂತೆ ಎನ್‌ಎಚ್‌ಡಿಸಿಯು ಸರಕು ಸಾಗಣೆ ವೆಚ್ಚವನ್ನು ಭೇದಾತ್ಮಕ ಆಧಾರದ ಮೇಲೆ ನೀಡುತ್ತದೆ. ಈಶಾನ್ಯ ಪ್ರಾಂತ್ಯಗಳಲ್ಲಿ ವಿಶೇಷ ಅವಶ್ಯಕತೆ ಇರುವುದನ್ನು ಮನಗಂಡು ಅದಕ್ಕೆ ನೀಡುವ ಬೆಂಬಲ ದರವನ್ನು ಸ್ವಲ್ಪ ಹೆಚ್ಚಿಸಲಾಗಿದೆ. ಪ್ರಮಾಣ ಮತ್ತು ಬೆಲೆಗಳ ದರದ ಪ್ರವೃತ್ತಿ, ಸರಕು ಸಾಗಣೆ ದರವನ್ನು ಆಧರಿಸಿ ಹಿಂಪಾವತಿಸಿರುವ ಹಣದ ಲೆಕ್ಕಚಾರವನ್ನು ಹಾಕಲಾಗಿದೆ. ಈಶಾನ್ಯ ಮತ್ತು ಗುಡ್ಡಗಾಡು/ ದೂರದ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರಾಮುಖ್ಯತೆಯನ್ನು ನೀಡಲಾಗುವುದು.

5.5 ನೂಲಿನ ಬೆಲೆಯ ಜೊತೆಗೆ ಯಾವ ಜಾಗದಿಂದ ನೂಲು ಸರಬರಾಜು ಆಗಿದೆಯೋ ಅದರ ಸಾಗಣೆ ವೆಚ್ಚವನ್ನು ಎನ್‌ಎಚ್‌ಡಿಸಿ ವಹಿಸಿಕೊಳ್ಳುತ್ತದೆ. ಅಂದರೆ ರೇಷ್ಮೆ ಮಂಡಳಿಗಳಲ್ಲಿ ನೊಂದಾಯಿಸಿದ ನೂಲಿನ ಗಿರಣಿ / ನೊಂದಾಯಿತ ಲೈಸನ್ಸ್‌ದಾರರು ಮತ್ತು ಸಂಸ್ಕರಿಸಿದ / ಬಣ್ಣದ ನೂಲಿನ ಅವಶ್ಯಕತೆ ಇದ್ದರೆ ಪೂರಕವಾದ ಸಂಸ್ಕರಣಾ / ಬಣ್ಣಗಳಿಗೆ ನೇರ ಸರಬರಾಜು ಆಗುತ್ತದೆ. ಅಂದರೆ ಆಯಾ ಪ್ರದೇಶದಲ್ಲಿ ಇರುವ ದಾಸ್ತಾನು ಮಳಿಗೆಗಳ ಏಜೆನ್ಸಿಗೆ ಕೊಡುತ್ತಾರೆ. ಸರಕು ಸಾಗಣೆ ವೆಚ್ಚವನ್ನು ಎನ್‌ಎಚ್‌ಡಿಸಿಯೇ ಭರಿಸುತ್ತದೆ. ಸಾಗಣೆ ವೆಚ್ಚ ಪಾವತಿಯನ್ನು ಸುಲಭ ಮಾಡಿಕೊಳ್ಳಲು 'ಟು ಪೇ' ಪದ್ಧತಿಯನ್ನು ಅಳವಡಿಸಲಾಗುವುದು. ಏಜೆನ್ಸಿಗಳು ಪಾವತಿಸಿದ ಪೂರ್ಣ ಹಣವನ್ನು ನಾಲ್ಕು ತಿಂಗಳಿಗೊಮ್ಮೆ ಎನ್‌ಎಚ್‌ಡಿಸಿ ಕೊಡುತ್ತದೆ. ಇದಕ್ಕೆ ಪ್ರತಿಯಾಗಿ ಏಜೆನ್ಸಿಗಳು ಎಲ್‌ಆರ್ / ಜೀಆರ್‌ಗಳನ್ನು ಸಲ್ಲಿಸಬೇಕಾಗುತ್ತದೆ. ಪ್ಯಾರಾ 5.2ರಲ್ಲಿ ನಮೂದಾದ ದರ ಅಥವಾ ಅದಕ್ಕಿಂತ ಕಡಿಮೆ ದರವನ್ನು ಒಪ್ಪಿಕೊಳ್ಳುತ್ತದೆ. ಹೀಗೆ ಎನ್‌ಎಚ್‌ಡಿಸಿ ಕೊಟ್ಟ ಹಣವನ್ನು ಭಾರತ ಸರ್ಕಾರವು ಹಿಂದಿರುಗಿಸುತ್ತದೆ. ಎನ್‌ಎಚ್‌ಡಿಸಿಯು ಏಜೆನ್ಸಿಗಳಿಗೆ ಸರಕು ಸಾಗಣೆ ವೆಚ್ಚವನ್ನು ತನ್ನದೇ ಆದ ಬ್ಯಾಂಕಿನ ಚೆಕ್‌ಗಳ ಮೂಲಕ ವಿತರಿಸುತ್ತದೆ. ಯಾವುದೇ ಸಂದರ್ಭದಲ್ಲೂ ಎನ್‌ಎಚ್‌ಡಿಸಿಯು ನೇರವಾಗಿ ಹಣವನ್ನು ಪಾವತಿ ಮಾಡುವುದಿಲ್ಲ. ಅಪೆಂಡಿಕ್ಸ್ ಬಿ ದಿಂದ ಪರಿಚ್ಛೇದ – 2ರಲ್ಲಿ ತಿಳಿಸಿರುವಂತೆ ನೂಲು ಖರೀದಿಯ ಪೂರ್ಣ ವಿವರಗಳನ್ನು, ಸಾರಿಗೆಯ ವಿವರಗಳನ್ನು ಬಳಕೆದಾರರು ನೀಡಬೇಕು.

5.6 ಸಾಧ್ಯವಾದಷ್ಟು ಮಟ್ಟಿಗೆ, ಸಮೀಪದ ಗಿರಣಿಗಳಿಗೆ ಅಥವಾ ಸಮೀಪದ ರಾಜ್ಯಗಳಿಗೆ ಹೊಂದಿಕೊಂಡ ಪ್ರದೇಶಗಳಿಗೆ ಯಾವುದೇ ಅಡೆ ತಡೆ ಇಲ್ಲದೆ ಸರಬರಾಜು ಆಗುವಂತೆ ಎನ್‌ಎಚ್‌ಡಿಸಿ ನೋಡಿಕೊಳ್ಳಬೇಕಾಗುತ್ತದೆ.

5.7 ಹೀಗೆ ಮಾರಾಟವಾದ ನೂಲನ್ನು ಬಳಕೆದಾರರ ಒಕ್ಕೂಟಕ್ಕೆ ಸರಬರಾಜು ಮಾಡಿದ ನಂತರವಷ್ಟೇ ಸರಕಾರದ ನೆರವು ದೊರೆಯುತ್ತದೆ. ಸಹಾಯ ಧನವನ್ನು ನಿಗದಿತ ದರದ ಆಧಾರದಲ್ಲಿ ನಾಲ್ಕು ತಿಂಗಳಿಗೊಮ್ಮೆ ಕೊಡಲಾಗುವುದು. ಹೀಗೆ ಪಾವತಿಸುವ ಮುನ್ನ ಎನ್‌ಎಚ್‌ಡಿಸಿಯು ಅಭಿವೃದ್ಧಿ ಆಯುಕ್ತರು (ಕೈಮಗ್ಗ) – (ಅನೆಕ್ಸರ್– 2 ಮತ್ತು ಅಪೆಂಡಿಕ್ಸ್ 'ಎ' ದಿಂದ ಅನೆಕ್ಸರ್ –2) ತಿಳಿಸಿದಂತೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

ಇಂತಹ ಪ್ರಮಾಣ ಪತ್ರವನ್ನು ಚಾರ್ಟರ್ಡ್ ಅಕೌಂಟೆಟ್ ನೀಡುತ್ತಾರೆ. ಲೆಕ್ಕ ಪರಿಶೋಧನಾ ಸರ್ಟಿಫಿಕೇಟ್‌ನಲ್ಲಿ ಏಜೆನ್ಸಿ ಆಧಾರಿತ ನೂಲು ಸರಬರಾಜಿನ ವಿವರಗಳನ್ನು (ಅಪೆಂಡಿಕ್ಸ್–ಬಿ ದಿಂದ ಅನೆಕ್ಸರ್–2) ಪ್ರತ್ಯೇಕವಾಗಿ ಸಲ್ಲಿಸಬೇಕು. ಇದರೊಂದಿಗೆ ಏಜೆನ್ಸಿಗಳು ಸ್ವೀಕೃತಿಯ ಸಂದರ್ಭದಲ್ಲಿ ಎಲ್‌ಆರ್ / ಜಿಆರ್ ಮತ್ತಿತರ ಪ್ರತಿಗಳನ್ನು ಎನ್‌ಎಚ್‌ಡಿಸಿಗೆ ಸಲ್ಲಿಸಬೇಕು.

5.8 ಆಡಿಟ್ ವರದಿ ಸಲ್ಲಿಸಿದ ನಂತರ ನಿಗದಿತ ದರಕ್ಕೆ ಅನುಗುಣವಾಗಿ ಸರ್ಕಾರದ ಪೂರ್ಣ ನೆರವಿನ ಕಂತನ್ನು ಪಾವತಿ ಮಾಡಲಾಗುವುದು. ಆಡಿಟ್ ವರದಿಯನ್ನು ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಕಚೇರಿಯು ಪರಿಶೀಲಿಸುವುದು. ಬಳಕೆದಾರ ಏಜೆನ್ಸಿಗಳ ಹಣವನ್ನು ಪಾವತಿಸುವುದಕ್ಕೆ ಅನುಕೂಲವಾಗುವಂತೆ ಎನ್‌ಎಚ್‌ಡಿಸಿಗೆ ಸರ್ಕಾರವು ಪ್ರತಿ ನಾಲ್ಕು ತಿಂಗಳಿಗೊಮ್ಮೆ ಮುಂಚಿತವಾಗಿ 100 ಲಕ್ಷಕ್ಕೂ ಮೀರದಂತೆ ಹಣ ಪಾವತಿಸುತ್ತದೆ. ಈ ಹಣವನ್ನು ಅಂತಿಮ ಸ್ವೀಕೃತಿ ಹಣದೊಂದಿಗೆ ತಾಳೆ ಹಾಕಲಾಗುವುದು. ಕಳೆದ ಸಾಲಿನಲ್ಲಿ ಎನ್‌ಎಚ್‌ಡಿಸಿಗೆ ಕೊಟ್ಟ ಹಣ ವಿನಿಯೋಗವಾಗಿದೆಯೋ ಇಲ್ಲವೋ ಎಂದು ಸಂಪೂರ್ಣ ಪರಿಶೀಲನೆಯ ನಂತರವೇ ಮುಂದಿನ ಕಂತನ್ನು ಸರ್ಕಾರ ನೀಡುತ್ತದೆ.

## 6. ಮಳಿಗೆಗಳ ಕಾರ್ಯಾಚರಣೆ

### 6.1 ಗುರಿ

ದೂರವಾಗಿರುವ, ಒಳ ಪ್ರದೇಶದಲ್ಲಿರುವ ಮತ್ತು ದೂರದ ಸ್ಥಳದಲ್ಲಿ ಇರುವ ನೇಕಾರರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಸೂಕ್ತ ಸಮಯದಲ್ಲಿ  ನೂಲು ಸರಬರಾಜು ಆಗುತ್ತಿಲ್ಲ. ಇಂತಹ ಪ್ರದೇಶಗಳಲ್ಲಿ ನೂಲು ಸರಬರಾಜು ಸುಲಲಿತವಾಗಿ ಸರಬರಾಜು ಆಗುವಂತೆ ಮಾಡಲು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇದೆ. ದಾಸ್ತಾನು ಇರುವ ಮಳಿಗೆಗೆ ಪ್ರೋತ್ಸಾಹ ನೀಡಲು (ಅಂದರೆ ಮಿಲ್‌ಗೇಟ್ ದರ ಯೋಜನೆಯ ಮೂಲಕ ನೂಲುಗಳನ್ನು ಪಡೆದಿರುವ ಮತ್ತು ಏಜೆನ್ಸಿಗಳಿಂದ ನೂಲುಗಳನ್ನು ನೇರವಾಗಿ ಪಡೆದಿರುವುದು) ಎಲ್ಲಾ ಬಗೆಯ ನೂಲನ್ನು ನೂಲು ಮಳಿಗೆಗಳಿಂದ ಪೂರೈಸಲಾಗುವುದು. ಆದರೆ, ಮಿಲ್‌ಗೇಟ್ ದರ ಯೋಜನೆ ಅಡಿಯಲ್ಲಿ ಎನ್‌ಎಚ್‌ಡಿಸಿ ಖರೀದಿಸಿದ ಹಣವನ್ನು ಡಿಪೋಗಳನ್ನು ನಡೆಸಲು ಬೇಕಾದ ಚಾರ್ಜ್‌ಗಳಿಗೆ ಲೆಕ್ಕಹಾಕಲಾಗುವುದು. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಎನ್‌ಎಚ್‌ಡಿಸಿ ಬಹಳಷ್ಟು ನೂಲಿನ ಮಳಿಗೆಯನ್ನು ಪ್ರಾರಂಭಿಸಬೇಕಿದೆ. ಇದರ ಮೂಲಕ ಗುಣಮಟ್ಟ ಮತ್ತು ವಿಸ್ತೃತ ವಿತರಣಾ ವ್ಯವಸ್ಥೆಯನ್ನು ಅಳವಡಿಸಲಾಗುವುದು.

### 6.2 ವ್ಯಾಪ್ತಿ

ಪ್ಯಾರಾ 2.1ರಲ್ಲಿ ಬರುವ ಎಲ್ಲಾ ಏಜೆನ್ಸಿಗಳು ಮಳಿಗೆಗಳ ಮೂಲಕ ಕೆಲಸ ನಿರ್ವಹಿಸಲು ಅವಕಾಶಗಳಿವೆ.

### 6.3 ಸ್ಥಳ

ಎನ್‌ಎಚ್‌ಡಿಸಿಯೊಂದಿಗೆ ಸಮಾಲೋಚಿಸಿದ ನಂತರವೇ ಮಳಿಗೆಗಳ ಸ್ಥಳವನ್ನು ಏಜೆನ್ಸಿಗಳು ನಿರ್ಧರಿಸುತ್ತವೆ.

6.4 ಮಳಿಗೆಗಳನ್ನು ನಡೆಸಲು ಯಾವುದೇ ಹೊಸ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದಿಲ್ಲ. ಆದರೆ ಎನ್‌ಎಚ್‌ಡಿಸಿಯು ಶೇ. 2.5 ರ ಪ್ರಮಾಣದಲ್ಲಿ ಕಾರ್ಯನಿರತ ಏಜೆನ್ಸಿಗಳಿಗೆ ಹಣವನ್ನು ಮರುಪಾವತಿ ಮಾಡುತ್ತದೆ. ಮಿಲ್‌ಗೇಟ್ ದರ ಯೋಜನೆಯಲ್ಲಿ ಅವಕಾಶ ಕಲ್ಪಿಸಿದಂತೆ ಅಪೆಂಡಿಕ್ಸ್ 'ಸಿ' ನಲ್ಲಿರುವ ಅನೆಕ್ಸರ್ –2ವನ್ನು ಆಧರಿಸಿ ಎನ್‌ಎಚ್‌ಡಿಸಿಗೆ ಸರಕಾರ ಹಣ ಪಾವತಿ ಮಾಡುತ್ತದೆ.

## 7. ಮೊಬೈಲ್ ವ್ಯಾನುಗಳ ಕಾರ್ಯಾಚರಣೆ

## 7.1 ಗುರಿ

ದೂರದ ಪ್ರದೇಶಗಳಲ್ಲಿರುವ ನೇಕಾರರಿಗೆ ಸೌಲಭ್ಯ ಒದಗಿಸುವ ಸಲುವಾಗಿ ಏಜೆನ್ಸಿಗಳು ಪ್ರತಿ ತಿಂಗಳಿಗೊಮ್ಮೆ ಮೊಬೈಲ್ ವ್ಯಾನ್‌ಗಳ ಕಾರ್ಯಾಚರಣೆಯನ್ನು ಮಾಡುತ್ತವೆ. ಹಾಗಾಗಿ ದೂರದ ಪ್ರದೇಶಗಳಲ್ಲಿರುವ ನೇಕಾರರು ನೂಲಿನ ಕೊರತೆಯಿಂದ ಬಳಲುವುದಿಲ್ಲ.

## 7.2 ವ್ಯಾಪ್ತಿ

ಪ್ರತಿಯೊಂದು ಏಜೆನ್ಸಿಗಳನ್ನು ಪ್ಯಾರಾ 2.1ರ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ. ಈ ಏಜೆನ್ಸಿಗಳು ಮೊಬೈಲ್ ವ್ಯಾನ್ ಬಳಸುವುದಕ್ಕೆ ಅವಕಾಶಗಳಿವೆ. ಆದರೆ, ಮಳಿಗೆಗಳನ್ನು ನಡೆಸುತ್ತಿರುವ ಏಜೆನ್ಸಿಗಳಿಗೆ ಮೊಬೈಲ್ ವ್ಯಾನ್ ಬಳಸುವಂತಿಲ್ಲ.

ಪ್ರತಿಯೊಂದು ರಾಜ್ಯಕ್ಕೆ ಒಂದರಂತೆ ಒಟ್ಟು 40 ಮೊಬೈಲ್ ಸೇವೆಗಳನ್ನು ಕಲ್ಪಿಸಬಹುದಾಗಿದೆ. ಒಂದು ವೇಳೆ ಅತಿ ಹೆಚ್ಚು ಮೊಬೈಲ್ ಸೇವೆಗಳನ್ನು ಕಲ್ಪಿಸಲು ಕೈಮಗ್ಗ ಅಭಿವೃದ್ಧಿ ಆಯುಕ್ತರ ಅನುಮತಿಯನ್ನು ಪಡೆಯಬೇಕಾಗುತ್ತದೆ. ಮೊಬೈಲ್ ವ್ಯಾನ್ ಸೇವೆಗೆ ಪ್ರಮುಖ ಆದ್ಯತೆಯನ್ನು ಈಶಾನ್ಯ ರಾಜ್ಯ ಮತ್ತು ಗುಡ್ಡ ಗಾಡು ಪ್ರದೇಶಗಳಲ್ಲಿ ನಡೆಸುವುದಕ್ಕೆ ಆದ್ಯತೆ ಕೊಡಲಾಗುವುದು. ಕೈಮಗ್ಗ ಅಭಿವೃದ್ಧಿ ಆಯುಕ್ತರು ಅನ್ಯ ರಾಜ್ಯಗಳ ದೂರದ ಪ್ರದೇಶಗಳನ್ನು ಗುರುತಿಸುವರು. ಹೀಗೆ ಪ್ರದೇಶಗಳನ್ನು ಆರಿಸುವಾಗ ಯೋಜನಾ ಆಯೋಗದೊಂದಿಗೆ ಸಮಾಲೋಚಿಸುವರು.

## 7.3 ನೆರವು

ಏಜೆನ್ಸಿಗಳು ಒಂದು ತಿಂಗಳಲ್ಲಿ 20 ದಿನಗಳನ್ನು ಮೊಬೈಲ್ ಸೇವೆಗೆ ಬಳಸಿಕೊಳ್ಳಬಹುದು. ಮೊಬೈಲ್ ವ್ಯಾನ್‌ಗಳಿಗೆ ಪ್ರತಿನಿತ್ಯ 1,500 ರೂ. ಅಥವಾ ನೈಜ ಖರ್ಚು (ಯಾವುದು ಕಡಿಮೆಯೋ ಅದು) ಮರುಪಾವತಿಯಾಗುತ್ತದೆ. ಕೈಮಗ್ಗ ಬಟ್ಟೆಗಳನ್ನು ಕೊಳ್ಳುವ ಮತ್ತು ಇನ್ನಿತರೆ ಉಪಯೋಗಗಳಿಗೂ ಮೊಬೈಲ್ ವ್ಯಾನ್‌ಗಳನ್ನು ಬಳಸ ಬಹುದಾಗಿದೆ.

ಮೊಬೈಲ್ ವ್ಯಾನುಗಳ ವೆಚ್ಚವನ್ನು ಎನ್‌ಎಚ್‌ಡಿಸಿ ಏಜೆನ್ಸಿಗಳಿಗೆ ಮರುಪಾವತಿಸುತ್ತದೆ. ಪ್ಯಾರಾ 5.2ರಲ್ಲಿ ನಮೂದಿಸಿದಂತೆ ಅಪೆಂಡಿಕ್ಸ್–2 ದ ಅನೆಕ್ಸರ್–2ರಲ್ಲಿ ಉಲ್ಲೇಖವಾದ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಎನ್‌ಎಚ್‌ಡಿಸಿಗೆ ಹಣ ಸಂದಾಯವಾಗುತ್ತದೆ.

ಇದಕ್ಕಾಗಿ ಪ್ಯಾರಾ 5.2ರ ಅನ್ವಯ 36 ಲಕ್ಷ ರೂ. ಗಳನ್ನು ನಿಗದಿ ಪಡಿಸಲಾಗಿದೆ.

**8. ಉಸ್ತುವಾರಿ**

ಈ ಕಾರ್ಯಕ್ರಮದ ಉಸ್ತುವಾರಿಯನ್ನು ಎನ್‌ಎಚ್‌ಡಿಸಿಯ ನಿರ್ದೇಶಕರ ಮಂಡಳಿ ಮತ್ತು ಅಭಿವೃದ್ಧಿ ಆಯುಕ್ತರು (ಕೈಮಗ್ಗ) ನಿಗದಿತವಾಗಿ ಪರಾಮರ್ಶೆ ನಡೆಸುತ್ತಾರೆ.

**9. ಪ್ರಚಾರ**

ಮಿಲ್‌ಗೇಟ್ ದರ ಯೋಜನೆಗೆ ಹೆಚ್ಚು ಪ್ರಚಾರ ನೀಡಬೇಕಾದ ಅವಶ್ಯಕತೆ ಇದೆ. ಯೋಜನೆಯ ಪ್ರಚಾರ ಕಾರ್ಯವನ್ನು ವಿವಿಧ ಭಾಷೆಯ ದಿನಪತ್ರಿಕೆಗಳ ಮೂಲಕ ಮುದ್ರಣ ಮತ್ತು ಕರಪತ್ರಗಳ ವಿತರಣೆ ಮೂಲಕ, ಭಿತ್ತಿಪತ್ರಗಳನ್ನು ಅಂಟಿಸುವ ಮೂಲಕ, ಗೋಡೆ ಬರಹಗಳು ಮತ್ತು ಖರೀದಿದಾರರ ಮಾರಾಟಗಾರರ ಸಭೆಗಳ ಮೂಲಕ ನಡೆಸಲಾಗುವುದು. ಇದರ ಪ್ರಚಾರ ಕಾರ್ಯದ ಉಸ್ತುವಾರಿಯನ್ನು ಎನ್‌ಎಚ್‌ಡಿಸಿ ನಿಗಮ ಮಾಡುತ್ತದೆ. ಇದಕ್ಕೆ ತಗುಲಿದ ವೆಚ್ಚವನ್ನು ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಮರುಪಾವತಿಸುತ್ತಾರೆ.

**ಬಿ. ಭಾರತೀಯ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಬಂಡವಾಳ ಹೂಡಿಕೆ**

**1. ಹಿನ್ನೆಲೆ**

1983ನೇ ಫೆಬ್ರವರಿಯಲ್ಲಿ ಎನ್‌ಎಚ್‌ಡಿಸಿ ಕಾರ್ಯಾರಂಭ ಮಾಡಿತು. 1956ನೇ ಕಂಪನಿ ಕಾಯ್ದೆ ಆಧಾರದ ಮೇಲೆ ಎನ್‌ಎಚ್‌ಡಿಸಿ ಭಾರತದ ಸರ್ಕಾರಿ ಸ್ವಾಮ್ಯಕ್ಕೆ ಸೇರಿದೆ. ಖರೀದಿ ಮತ್ತು ವಿತರಣೆ ಮೂಲಕ ಎನ್‌ಎಚ್‌ಡಿಸಿಯು ಕೈಗೆಟಕುವ ದರದಲ್ಲಿ ಕೈಮಗ್ಗ ಸಾಮಗ್ರಿಗಳನ್ನು ಪೂರೈಸುತ್ತಿದೆ. ಕೈಮಗ್ಗ ಮಾರುಕಟ್ಟೆಯನ್ನು ವಿಸ್ತರಿಸುವುದರ ಜೊತೆಗೆ ಪ್ರಗತಿಪರ ಕಾರ್ಯಕ್ರಮಗಳನ್ನು ಎನ್‌ಎಚ್‌ಡಿಸಿ ಕೈಗೊಳ್ಳುತ್ತಿದೆ. ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಕಚೇರಿಯ ಆಡಳಿತ ನಿರ್ವಹಣೆಯಲ್ಲಿ ಎನ್‌ಎಚ್‌ಡಿಸಿ ಕೆಲಸ ಮಾಡುತ್ತದೆ. ಎನ್‌ಎಚ್‌ಡಿಸಿಯನ್ನು ಬಲಪಡಿಸುವ ಸಲುವಾಗಿ ಭಾರತ ಸರ್ಕಾರ ಪ್ರತಿವರ್ಷ 1 ಕೋಟಿ ರೂಪಾಯಿ ಹಣವನ್ನು ಷೇರುಗಳಲ್ಲಿ ಹೂಡುತ್ತಿದೆ.

ಎನ್‌ಎಚ್‌ಡಿಸಿಯು ನೂಲು, ಬಣ್ಣ ಮತ್ತು ರಾಸಾಯನಿಕ ವಸ್ತುಗಳನ್ನು ರಾಜ್ಯ ಕೈಮಗ್ಗ ಏಜೆನ್ಸಿಗಳ ಮೂಲಕ, ಅಪೆಕ್ಸ್ ಮಂಡಳಿಗಳ ಮೂಲಕ, ಪ್ರಾಂತೀಯ ಘಟಕಗಳ ಮೂಲಕ, ನೇಕಾರರ ಸಹಕಾರ ಸಂಘ, ಕೈಮಗ್ಗ ಅಭಿವೃದ್ಧಿ ಕೇಂದ್ರ, ಕೈಮಗ್ಗ ಒಕ್ಕೂಟ ಮತ್ತು ಕೈಮಗ್ಗ ಉತ್ಪಾದನಾ ಘಟಕಗಳ ಮೂಲಕ ರಫ್ತು ಉದ್ದಿಮೆಯಲ್ಲಿ ನಿರತವಾಗಿದೆ. ಎಚ್‌ಎಚ್‌ಡಿಸಿ ಹತ್ತಿ, ಪಾಲಿಯಸ್ಟರ್, ವಿಸ್ಕೋಸ್, ಬ್ಲೆಂಡ್ಸ್, ವುಲ್ಲನ್, ರೇಷ್ಮೆ, ಸೆಣಬು ಇತ್ಯಾದಿ ನೂಲುಗಳನ್ನು 522ಕ್ಕೂ ಹೆಚ್ಚು ನೂಲಿನ ಗಿರಣಿಗಳಿಂದ ಖರೀದಿಸುತ್ತದೆ ಮತ್ತು 1271 ಏಜೆನ್ಸಿಗಳಿಗೆ ಸರಬರಾಜು ಮಾಡುತ್ತದೆ.

ಎನ್‌ಎಚ್‌ಡಿಸಿಯ ಕಾರ್ಯಚಟುವಟಿಕೆಗಳು:–

- ಕೈಮಗ್ಗ ನೇಕಾರರಿಗೆ ಬೇಕಾದ ನೂಲು, ಬಣ್ಣ ಮತ್ತು ರಾಸಾಯನಿಕ ವಸ್ತುಗಳು ದೊರೆಯುವಂತೆ ಮಾಡುವುದು
- ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಸೂಕ್ತ ತಂತ್ರಜ್ಞಾನ ಪಡೆಯಲು ಸಹಕರಿಸುವುದು
- ಉತ್ಪಾದನೆ ಹೆಚ್ಚಿದಂತೆಲ್ಲಾ ಅದಕ್ಕೆ ಪೂರಕವಾದ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವುದು. ರಫ್ತು ಉದ್ಯಮಕ್ಕೆ ಪ್ರೋತ್ಸಾಹ ಕೊಡುವುದು.
- ಕೇಂದ್ರ ಸರ್ಕಾರದ ಹಣಕಾಸು ನೆರವು, ಸಾಲ ಮತ್ತು ದತ್ತಿ ನಿಧಿಗಳನ್ನು ಕೈಮಗ್ಗ ನಿಗಮಗಳಿಗೆ, ಸಹಕಾರಿ ಸೊಸೈಟಿಗಳಿಗೆ ಮತ್ತು ಕೈಮಗ್ಗ ವಲಯದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳಿಗೆ ನೀಡುವುದಕ್ಕೆ ಎನ್‌ಎಚ್‌ಡಿಸಿ ನೆರವಾಗುತ್ತದೆ.

**2. ಗುರಿ**

ಇದರ ಮೂಲ ಉದ್ದೇಶ ಎನ್‌ಎಚ್‌ಡಿಸಿಗೆ ಹೆಚ್ಚುವರಿ ಷೇರುಗಳನ್ನು ಕೊಡುವುದು. ಈ ಮೂಲಕ ಎನ್‌ಎಚ್‌ಡಿಸಿಯ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಬೇಕಾದ ಸಾಲವನ್ನು ಪಡೆಯಲು ಅನುಕೂಲವಾಗುತ್ತದೆ. ಕೈಮಗ್ಗ ನೇಕಾರರು / ಕೈಮಗ್ಗ ಸಂಸ್ಥೆಗಳಿಗೆ ನೂಲು ಸರಬರಾಜು ಪ್ರಮಾಣವನ್ನು ಹೆಚ್ಚಿಸಲೂ ಇದು ನೆರವಾಗುತ್ತದೆ.

**3. ಧ್ಯೇಯ**

ಭಾರತ ಸರ್ಕಾರವು ತನ್ನ 11ನೇ ಯೋಜನೆಯಲ್ಲಿ ಎನ್‌ಎಚ್‌ಡಿಸಿಯಲ್ಲಿ ಷೇರನ್ನು ಹೆಚ್ಚಿಸುವ ಗುರಿಯನ್ನು ಇಟ್ಟುಕೊಂಡಿದೆ. ಈ ಮೂಲಕ ಎನ್‌ಎಚ್‌ಡಿಸಿ ತನ್ನ ಸಂಪನ್ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಹೆಚ್ಚಿನ ಸಾಲವನ್ನು ಪಡೆಯಬಹುದು.

1. ಇಂತಹ ಪ್ರಸ್ತಾಪಕ್ಕೆ ಎನ್‌ಎಚ್‌ಡಿಸಿಯ ನಿರ್ದೇಶಕರ ಮಂಡಳಿ ಸಮ್ಮತಿಸಬೇಕು.
2. ಪ್ರತಿ ವರ್ಷ ಷೇರಿಗಾಗಿ ಗರಿಷ್ಟ 1.00 ಕೋಟಿ ರೂಪಾಯಿ ಹಣ ನಿಗದಿ
3. ಎನ್‌ಎಚ್‌ಡಿಸಿ ನಿರ್ದೇಶಕ ಮಂಡಳಿಯ ಅನುಮೋದನೆ ಇರುವ ತನ್ನ ಹೊಸ ಪ್ರಸ್ತಾಪಗಳೊಂದಿಗೆ ಕಳೆದ ಸಾಲಿನ ಆಯವ್ಯಯ ಲೆಕ್ಕಪತ್ರಗಳನ್ನು ಸಲ್ಲಿಸಬೇಕು.
4. ಸರ್ಕಾರ ನೀಡುವ ಹಣವನ್ನು ತನ್ನ ಕಾರ್ಯಚಟುವಟಿಕೆಗೆ ಎನ್‌ಎಚ್‌ಡಿಸಿ ಬಳಸಿಕೊಳ್ಳಬೇಕು. ಪ್ರತಿ ಷೇರಿಗೆ 100 ರೂಪಾಯಿಯಂತೆ ಒಂದು ಲಕ್ಷ ಷೇರನ್ನು ಭಾರತದ ರಾಷ್ಟ್ರಪತಿಗಳ ಹೆಸರಿನಲ್ಲಿ ಇಡುವುದು. ಪ್ರಸ್ತಾಪದೊಡನೆ ಈ ಪ್ರಮಾಣ ಪತ್ರವನ್ನು ಪ್ರಸ್ತಾವದೊಂದಿಗೆ ಲಗತ್ತಿಸುವುದು.
5. ಭಾರತ ಸರ್ಕಾರ (ರಕ್ಷಣೆ, ಭಾರೀ ಕೈಗಾರಿಕೆ ಮತ್ತು ಸಾರ್ವಜನಿಕ ಎಂಟರ್‌ಪ್ರೈಸಸ್, ಸಾರ್ವಜನಿಕ ಇಲಾಖಾ ಸಚಿವಾಲಯಗಳು) ವಿಧಿಸಿದ ಎಲ್ಲಾ ಷರತ್ತುಗಳ ಪಾಲನೆಯನ್ನು ಎನ್‌ಎಚ್‌ಡಿಸಿ ಮಾಡುತ್ತದೆ. ಕಾಲಕಾಲಕ್ಕೆ ತಕ್ಕಂತೆ ಡಿವಿಡೆಂಡ್ ಅನ್ನು ಭಾರತ ಸರ್ಕಾರಕ್ಕೆ ಕೊಡುತ್ತದೆ.
6. ಎನ್‌ಎಚ್‌ಡಿಸಿ ಮತ್ತು ಜವಳಿ ಸಚಿವರ ನಡುವೆ ಆಗಿರುವ ಎಂ.ಒ.ಯು. ಪ್ರಕಾರ ಗುರಿಯನ್ನು ತಲುಪುವುದಕ್ಕೆ ಬೇಕಾದ ಪ್ರಯತ್ನಗಳನ್ನು ನಡೆಸುತ್ತೇವೆ ಎಂದು ಎನ್‌ಎಚ್‌ಡಿಸಿ ಖಚಿತಪಡಿಸಿಕೊಳ್ಳಬೇಕು.